## ಇದು ನೃತ್ಯವೇ?

ನಾನು ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ನೋಡುವುದಿಲ್ಲ. ಅನಿರೀಕ್ಷಿತವಾಗಿ 26.8.16 ರಲ್ಲಿ ಮರು ಪ್ರಸಾರಗೊಂಡ ಕಾರ್ಯಕ್ರಮ ನೋಡಿದೆ. ಡ್ಯಾನ್ಸ್ ಮಾಡುವವನೊಬ್ಬ ಬೆತ್ತಲಾಗಿ ಬಂದಿದ್ದ. ತೊಡೆ ಸಂದಿಗೆ ಅಡ್ಡಲಾಗಿ ದೊಡ್ಡ ಟೇಪ್‌ರಿಕಾರ್ಡರ್ ಇಟ್ಟುಕೊಂಡು ಬಂದಿದ್ದ. ಹಿಂಭಾಗ ಮಾಲಾಶ್ರೀಗೆ ಕಾಣಬಾರದೆಂದು ಪೇಪರ್ ಸುತ್ತಿಕೊಂಡಿದ್ದ. ಆ್ಯಂಕರ್ ಅನುಶ್ರೀ ಸದ್ಯ ಸಣ್ಣ ಟೇಪ್ ರಿಕಾರ್ಡರ್ ಅಡ್ಡ ಹಿಡಿಯಲಿಲ್ಲ ಎಂದಳು. ಬೆತ್ತಲೆ ಅವತಾರ ನೋಡಿ ಗ್ಯಾಲರಿಯಲ್ಲಿದ್ದವರೊಬ್ಬರು ಮೂರ್ಛೆ ಬಿದ್ದರು. ನಮ್ಮ ಯುವಜನಾಂಗ ಎತ್ತ ಸಾಗುತ್ತಿದೆ. ಅಮೀರ್‌ಖಾನ್‌ರ ಪಿ.ಕೆ. ಸಿನಿಮಾ ಪ್ರಭಾವವೇ ಇರಬಹುದು.

—ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ

## ಇಂತಹ ಉಪಕಥೆ ಬೇಕಿಲ್ಲ

ಈಗಲೂ ಧಾರಾವಾಹಿಗಳಲ್ಲಿ ವಿಷ ಹಾಕುವುದು, ಕಿಡ್‌ನ್ಯಾಪ್ ಮಾಡುವುದು, ಎಣ್ಣೆ ಹಾಕಿ ಬೀಳಿಸಿ ಸಂತೋಷ ಪಡುವುದು.. ಇವೆಲ್ಲಾ ಸರ್ವೆ ಸಾಮಾನ್ಯವಾಗಿ ಹೋಗಿದೆ. ಕೊಲೆ ಮಾಡುವವರಿಗೆ ಒಳ್ಳೆಯ ಸಂಚುಗಳನ್ನು ಹೇಳಿಕೊಡುವಂತಿದೆ. ಈಗ ಪುಟ್ಟ ಗೌರಿ ಮದುವೆಯಲ್ಲಿ ಶವದ ಪೆಟ್ಟಿಗೆಯಲ್ಲಿ ಗೌರಿಯನ್ನು ಮಲಗಿಸಿ ಕೊಲೆ ಮಾಡುವ ಸಂಚು. ಕಥೆಯನ್ನು ಎಳೆಯುವುದಕ್ಕಾಗಿ ಇಂತಹ ಉಪಕಥೆಗಳು ಬೇಕಿಲ್ಲ. ಎಲ್ಲರಿಗೂ ಪ್ರಿಯವಾಗುವಂತಹ ಧಾರಾವಾಹಿಗಳನ್ನು ಪ್ರಸಾರ ಮಾಡಿ.

—ಮಾಲತಿ ಪುರುಷೋತ್ತಮ್, ಬೆಂಗಳೂರು

## ಮರು ಸೃಷ್ಟಿ

ಸ್ಟಾರ್ ಸುವರ್ಣದಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿ 'ಹರ ಹರ ಮಹಾದೇವ' ತುಂಬಾ ಅದ್ಧೂರಿ ಹಾಗೂ ರೋಚಕವಾಗಿ ಮೂಡಿ ಬರುತ್ತಿದೆ. ಕಣ್ಮನ ಸೆಳೆಯುವ ವೈಭವಯುತ ರಂಗಸಜ್ಜಿಕೆ, ಪುರಾಣ ಕಾಲಕ್ಕೆ ತಕ್ಕಂತಹ ವೇಷ ಭೂಷಣಗಳು ಹಾಗೂ ಸಂಭಾಷಣೆ, ಸೂಕ್ತ ಪಾತ್ರಧಾರಿಗಳ ಆಯ್ಕೆ ಇವುಗಳಿಂದಾಗಿ ಈ ಧಾರಾವಾಹಿಯ ಘನತೆ ಹೆಚ್ಚಿದೆ.

ಅಸಂಬದ್ಧ ಧಾರಾವಾಹಿಗಳ ಬದಲು ನವರಸಗಳಿಂದ ಕೂಡಿ ಮನರಂಜನೆಯ ಜತೆಗೆ ಭಕ್ತಿಭಾವವನ್ನು ಹುಟ್ಟಿಸಿ ಬುದ್ಧಿ– ಮನಸ್ಸು ಎರಡಕ್ಕೂ ನೆಮ್ಮದಿ ನೀಡುವ ಇಂತಹ ಒಂದೋ ಎರಡೋ ಧಾರಾವಾಹಿಗಳನ್ನು ನೋಡಿದರೆ ಸಾಕು ಎನಿಸುತ್ತಿದೆ. ಇಷ್ಟೆಲ್ಲಾ ಧನಾತ್ಮಕ ಅಂಶಗಳ ಜೊತೆ ಈ ಧಾರಾವಾಹಿ ಹಿಂದೆ ಸ್ಟಾರ್ ಹಿಂದಿ ಚಾನೆಲ್‌ನಲ್ಲಿ ಪ್ರಸಾರವಾಗುತ್ತಿದ್ದ ಇದೇ ಹೆಸರಾಂತ ಧಾರಾವಾಹಿಯ ಮರು ಸೃಷ್ಟಿ ಎಂಬುದು ಸ್ವಲ್ಪ ಬೇಸರದ ವಿಷಯ.

—ಮೀರಾ ಮೋಹನ್, ಬೆಂಗಳೂರು

ವಾರದ ಪತ್ರ

## ಕುತಂತ್ರ ಕಲಿಕೆಯ ಪಾಠ ಶಾಲೆ

ಟಿವಿಯಲ್ಲಿ ಅದರಲ್ಲೂ ಕಲರ್ಸ್ ಕನ್ನಡದ ಪ್ರತಿ ಧಾರಾವಾಹಿಗಳಲ್ಲೂ ಕುತಂತ್ರವನ್ನೆ ಆಧಾರಸ್ತಂಭವನ್ನಾಗಿಟ್ಟುಕೊಂಡು ದಿನಕ್ಕೊಂದು ಹೊಸ ಹೊಸ ಕುತಂತ್ರಗಳನ್ನು ರಚಿಸಿ, ರೂಪಿಸಿ, ನಿರ್ದೇಶಿಸಿ ಸುಳ್ಳು, ವಂಚನೆ, ಕ್ರೌರ್ಯಗಳ ಸರಮಾಲೆಯ ವೈಭವೀಕರಣ ನಡೆಸುತ್ತಿದ್ದಾರೆ.

ಉದಾಹರಣೆಗೆ 'ಪುಟ್ಟ ಗೌರಿ', 'ಲಕ್ಷ್ಮಿ ಬಾರಮ್ಮ'. ಈಗಿನ ಜನಾಂಗದ ಮಾನಸಿಕ ಸ್ವಾಸ್ಥ್ಯದ ಮೇಲೆ ಯಾವ ಮಟ್ಟದಲ್ಲಿ ಪರಿಣಾಮ ಬೀರುತ್ತದೆ ಎಂದರೆ ಯೌವನಕ್ಕೆ ಕಾಲಿಡುವ ಹುಡುಗನಿಗೆ ಪ್ರತಿನಿತ್ಯವೂ ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಸಾರಾಯಿಯನ್ನು ಕುಡಿಸಿ ಕುಡುಕನನ್ನಾಗಿ ಮಾಡಿ ಸಮಾಜಕ್ಕೆ ಕೊಟ್ಟಂತೆ ಸುಳ್ಳುಗಾರರನ್ನು ಕುತಂತ್ರಿಗಳನ್ನು ತಯಾರು ಮಾಡುವ ಕಾರ್ಯಾಗಾರದಂತಿವೆ ಈ ಧಾರಾವಾಹಿಗಳು.

'ಕೆಡುಕು ನಿತ್ಯ ವಸ್ತುವಾಗಬಾರದು. ಅದು ಅನಿತ್ಯವಸ್ತು ಆದ್ದರಿಂದ ಬರೀ ಕೆಡುಕನ್ನೇ ಹೇಳ್ತಾಹೋಗೋದು ಸರಿಯಲ್ಲ. ಹಾಗೆ ಮಾಡಿದರೆ ಉದ್ಯಾನ ಇರೋವಾಗ ಚರಂಡೀಲಿ ಆಟ ಆಡಿದ ಹಾಗೆ' ಎಂದು ನಮ್ಮ ರಾಷ್ಟ್ರಕವಿ ಕುವೆಂಪು ಅವರು ಸಂದರ್ಶನ ಒಂದರಲ್ಲಿ ಹೇಳಿದ್ದ ಮಾತು ಪ್ರತಿಯೊಬ್ಬ ಬರಹಗಾರನಿಗೂ ಕೊಟ್ಟ ಎಚ್ಚರಿಕೆ ಹಾಗೂ ಸುಸಂಸ್ಕೃತ ಸಮಾಜದ ನಿರ್ಮಾಣ ಮಾಡಲು ಕೊಟ್ಟ ಸಂದೇಶ.

—ಅನಿಕೇತನ, ಮೈಸೂರು

## ಧಾರಾವಾಹಿಗಳಿಗಿಂತ ಮೇಲು!

ಕಲರ್ಸ್ ಕನ್ನಡದ ಆರಂಭದ ದಿನಗಳಿಂದಲೂ ಅದರಲ್ಲಿನ ಒಳ್ಳೆಯ ಕಾರ್ಯಕ್ರಮಗಳನ್ನು ನೋಡುತ್ತಿದ್ದ ನನಗೆ ಇತ್ತೀಚೆಗಂತೂ ತೀರಾ ನಿರಾಶೆಯಾಗಿದೆ. ಶನಿವಾರ – ಭಾನುವಾರ ಪ್ರಸಾರವಾಗುವ ಮಜಾ ಟಾಕೀಸ್ ಏಕತಾನತೆಯಿಂದ ನರಳುತ್ತಿದೆ. ಅದು ಹಾಸ್ಯವೋ, ಅಪಹಾಸ್ಯವೋ ಎಂದು ಗೊತ್ತಾಗದೆ, ನಗುವೂ ಬಾರದೆ ಪೇಚಾಡುವಂತಾಗಿದೆ. ಕಾರ್ಯಕ್ರಮದ ಕೊನೆಗೆ ನಡೆಯುವ ಪ್ರಶ್ನೋತ್ತರಗಳನ್ನು ನಿಲ್ಲಿಸುವುದು ಸೂಕ್ತ.

ಆದರೆ ಒಂದು ಸಮಾಧಾನ ಏನೆಂದರೆ ಸರತಿ ಸಾಲಿನಲ್ಲಿರುವ ಮನೆಹಾಳು ಧಾರಾವಾಹಿಗಳಿಗಿಂತ ಇದು ಮೇಲು ಅಷ್ಟೇ!.

—ಬಾಲಕೃಷ್ಣ ಕತ್ತಲ್‌ಸಾರ್, ಪಡುಪೆರಾರ

## ಎಂತಹ ವಿಪರ್ಯಾಸ

ಕನ್ನಡ ಕಲರ್ಸ್ ಹಾಗೂ ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಕಿನ್ನರಿ ಹಾಗೂ ಗಂಗಾ ಧಾರಾವಾಹಿಗಳಲ್ಲಿ ಪುಟ್ಟ ಬಾಲಕಿಯರದೆ ಮುಖ್ಯ ಕಥೆ. ಆದರೆ ಎರಡನ್ನೂ ತುಲನೆ ಮಾಡಿ ನೋಡಿದಾಗ ಗಂಗಾ ಧಾರಾವಾಹಿ ಘನತೆ, ಗಾಂಭೀರ್ಯದಲ್ಲಿ ಮೊದಲನೆ ಸ್ಥಾನ ಪಡೆಯುತ್ತದೆ. ಕಿನ್ನರಿಯಲ್ಲಿ ಸಂಭಾಷಣೆಕಾರರ ನುಡಿಗಳನ್ನು ಮಣಿ ಪಾತ್ರಧಾರಿ ವಯಸ್ಸಿಗೆ ಮೀರಿದಂತೆ ಒಪ್ಪಿಸುತ್ತಾಳೆ. ವೀಕ್ಷಕನಿಗೆ ನಿಜಕ್ಕೂ ಅದು ಸಹಿಸಲು ಅಸಾಧ್ಯ. ಅದರಲ್ಲೂ ತಾಯಿ ರೂಪದ ವಿಗ್ರಹದೊಂದಿಗೆ ಮಾತನಾಡುವ ಪರಿ ಮನಸ್ಸು ರೋಸಿ ಹೋಗುವಂತೆ ಮಾಡುತ್ತದೆ. ಇಲ್ಲಿ ನಿರ್ದೇಶಕ ವಿನೋದ್ ಸಂಪೂರ್ಣ ಎಡವಿದ್ದಾರೆ. ಅವರು ಸಂಭಾಷಣೆಕಾರನನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕಾಗಿತ್ತು. ಆದರೆ ಗಂಗಾದಲ್ಲಿ ಸಮಾಜದ ಅನೇಕ ಪಿಡುಗುಗಳನ್ನು ನಿವಾರಿಸುವ ಯತ್ನದಲ್ಲಿದ್ದಾರೆ. ಅದು ಅಷ್ಟೆ ಬಲವಾದ ರೀತಿಯಲ್ಲಿ ಮುಕ್ತಾಯಗೊಂಡರೆ ಗಂಗಾ ನಿಜಕ್ಕೂ ಒಂದು ಉತ್ತಮ ಧಾರಾವಾಹಿ ಆಗುವುದರಲ್ಲಿ ಸಂದೇಹವೇ ಇಲ್ಲ.

—ಎನ್. ಎಸ್. ಚಂದ್ರಶೇಖರ್, ಬೆಂಗಳೂರು

## ಕೋಮು ಸಾಮರಸ್ಯ ಶ್ಲಾಘನೀಯ

ಪ್ರಜಾ ಸುದ್ದಿವಾಹಿನಿಯವರು 29082016 ರಂದು ಕೋಮು ಸೌಹಾರ್ಧತೆಯ ಸೂಕ್ಷ್ಮವನ್ನು ಮನಮುಟ್ಟುವಂತೆ ವಿಶ್ಲೇಷಿಸಿದ್ದಾರೆ. ದುಷ್ಟ ಧರ್ಮಾಂಧರು ಎಂಬ ವಿಶೇಷ ಕಾರ್ಯಕ್ರಮ ಎಲ್ಲ ಆಯಾಮಗಳಲ್ಲಿ ಕ್ಷ ಕಿರಣ ಬೀರಿತು. ಅಮೆರಿಕೆಯಲ್ಲಿ ಹಿಂದೂ ದೇವತೆಗಳ ಚಿತ್ರಗಳನ್ನು ಶೂಗಳು, ಒಳ ಉಡುಪುಗಳಲ್ಲಿ ದುರ್ಬಳಕೆ ಮಾಡಲಾಯಿತು. ಇತ್ತೀಚೆಗೆ ಇಂತಹದೇ ಅವಹೇಳನಕಾರಿ ಕೆಲಸವನ್ನು ಮಂಗಳೂರಿನ ಯುವಕನೊಬ್ಬ ಮಾಡಿದ್ದಾನೆ. ಯಾಕೆ ಹೀಗೆಲ್ಲ ಯುವ ಜನತೆ ಜನರಲ್ಲಿ ವಿಷ ಬೀಜ ಬಿತ್ತುತ್ತಿದ್ದಾರೆ? ಜಗವೆಲ್ಲ ನಗುತಿರಲಿ ಜಗದಳವು ನನಗಿರಲಿ ಎಂಬ ನುಡಿಮುತ್ತು ಎಲ್ಲಿ ಹೋಯಿತು? ಇಂತಹ ದ್ವೇಷದ ದಳ್ಳುರಿಯಿಂದ ಬೇಯುತ್ತಿರುವ ಸಮಾಜದಲ್ಲೊಂದು ಆಶಾಕಿರಣ ಮಿನುಗುವಂತ ಸುದ್ದಿಯೊಂದು ಮುಂಬೈನಿಂದ ವರದಿಯಾಗಿದೆ. ರಮೀಜ್ ಶೇಖ್ ಎಂಬಾತ ದುಡ್ಡನ್ನು ಕಚೇರಿಯ ಪರ್ಸಿನಲ್ಲಿ ಬಿಟ್ಟು ಆಟೋದಲ್ಲಿ ಮಸೀದಿಗೆ ಪ್ರಾರ್ಥನೆಗೆ ಹೋಗಿದ್ದ. ನಡುದಾರಿಯಲ್ಲಿ ದುಡ್ಡು ಮರೆತು ಬಂದುದರ ಅರಿವಾಯಿತು. ಕಚೇರಿಗೆ ಮರಳಿದ ಮೇಲೆ ಹಣ ಸಂದಾಯ ಮಾಡುವೆನೆಂದುಕೊಂಡು ಪ್ರಾರ್ಥನೆ ಮುಗಿಯುವವರೆಗೆ ಆಟೊ ಚಾಲಕನಾದ ಶುಕ್ಲನಿಗೆ ಕಾಯಲು ಹೇಳಿದ. ಆದರೆ ಆಟೊ ಚಾಲಕ ರಮೀಜ್ ಶೇಖ್‌ರ ಕೈಗೆ ತಾವೇ ಹಣ ನೀಡಿ 'ನೀವು ದೇವರ ಕೆಲಸಕ್ಕೆ ತೆರಳುತ್ತಿದ್ದೀರಿ. ಮರಳಿ ಹೋಗಿ. ಮುಜುಗರ ಪಟ್ಟುಕೊಳ್ಳ ಬೇಡಿ' ಎಂದರು. ಒಂದು ಧರ್ಮವನ್ನು ಆಚರಿಸುವವರು ಮತ್ತೊಂದು ಧರ್ಮವನ್ನು ಗೌರವಿಸಬೇಕು. ಈ ದಿಶೆಯಲ್ಲಿ ವಾಹಿನಿಯ ಚರ್ಚೆ ಮನಸ್ಸಿಗೆ ಹಿಡಿಸಿತು.

— ಪ್ರಕಾಶ ಎಸ್.ಮನ್ನಂಗಿ, ಮೋಟೇಬೆನ್ನೂರು